ವಿಷಯ:- ಹುಬ್ಬಳ್ಳಿ- ಅಂಕೋಲ ರಸ್ತೆಯ ಕಾಮಗಾರಿ.

162(545)

ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಹುಬ್ಬಳ್ಳಿ-ಅಂಕೋಲ ರಸ್ತೆಯ ಕಾಮಗಾರಿಯು ಯಾವಾಗ ಪೂರ್ಣಗೊಂಡಿದೆ;

ಆ) ಈ ರಸ್ತೆಯ ಕಾಮಗಾರಿಯ ಬಗ್ಗೆ ಸರಕಾರವು ಪ್ರಶಂಸೆಯನ್ನು ನೀಡಿರುವುದೇ;

ಇ) ಇದಕ್ಕೆ ತಗಲಿರುವ ಖರ್ಚು ಎಷ್ಟು; ಎಷ್ಟು ಹಣ ಬಿಟುಗಡೆ ಮಾಡಲಾಗಿದೆ; ಬಾಕಿ ಇಡಲು ಕಾರಣಗಳೇನು;

ಈ) ಬಾಕಿ ಹಣವನ್ನು ಯಾವಾಗ ನೀಡಲಾಗುವುದು; (ವಿವರ ನೀಡುವುದು)?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಹುಬ್ಬಳ್ಳಿ-ಅಂಕೋಲ ರಸ್ತೆಯ ಕಾಮಗಾರಿಯು ಫೆಬ್ರವರಿ 1996ರಲ್ಲಿ ಪೂರ್ಣಗೊಂಡಿದೆ.

ಆ) ಇಲ್ಲ.

ಇ) ಇದಕ್ಕೆ ತಗಲಿರುವ ಖರ್ಚು 84.15 ಕೋಟಿ ರೂ.ಗಳು. ಕೆಲಸಕ್ಕೆ ತಗಲಿರುವ ಪೂರ್ತಿ ಮೊತ್ತವನ್ನು ಅಂದರೆ 84.15 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಬಾಲ ಕಾರ್ಮಿಕರ ಕುರಿತು.

163(546)

ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

1) ಸರ್ವೋಚ್ಚ ನ್ಯಾಯಾಲಯದ ಆದೇಶ ಪ್ರಕಾರ ಇತ್ತೀಚೆಗೆ ಬಾಲ ಕಾರ್ಮಿಕರ ಬಗ್ಗೆ ತೆಗೆದುಕೊಂಡ ಕ್ರಮಗಳೇನು;

2) ಈ ಬಗ್ಗೆ ಯೋಜನೆಯನ್ನೇನಾದರೂ ತಯಾರಿಸಲಾಗಿದೆಯೇ; ಹಾಗಿದ್ದಲ್ಲಿ ಅದರ ವಿವರ ನೀಡುವುದು;

3) ಈ ಯೋಜನೆಯನ್ನು ಮಾಡದಿದ್ದಲ್ಲಿ ಕಾರಣಗಳೇನು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳಿಂದ ಹಾಗೂ ಕಾರ್ಮಿಕ ರಾಜ್ಯ ಸಚಿವರು):-

1) ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಸಮಗ್ರವಾಗಿ ಜಾರಿಗೊಳಿಸಲು ಕ್ರಮವನ್ನು ಪ್ರಾರಂಭಿಸಲಾಗಿದೆ.